ಉ. ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಇದು ಯಾವ ರೀತಿ ಸಹಕಾರಿಯಾಗಲಿದೆ ?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ. ಬೆಂಗಳೂರಿನಿಂದ 18 ಕಿ.ಮೀ. ದೂರದಲ್ಲಿ ಬೆಂಗಳೂರು ವೈಟ್‌ಫೀಲ್ಡ್ ರಸ್ತೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಸಾದರಮಂಗಲ ಮತ್ತು ಪಟ್ಟಂದೂರು ಅಗ್ರಹಾರ ಗ್ರಾಮಗಳ 55 ಎಕರೆ 19 ಗುಂಟೆ ಜಮೀನಿನಲ್ಲಿ ಟೆಕ್ನಾಲಜಿ ಪಾರ್ಕ್ ಸ್ಥಾಪನೆಯಾಗಲಿದೆ.

ಆ. ಯೋಜನಾ ಪ್ರಾರಂಭಿಕ ಸಮಾವೇಶವು ದಿನಾಂಕ 28.1.1994 ರಂದು ನೆರವೇರಿತು.

ಇ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಸಿಕ್ಕಿದೆ. ಕೇಂದ್ರ ಸರ್ಕಾರ ಇದರಲ್ಲಿ ಭಾಗವಹಿಸುತ್ತಿಲ್ಲ. ರಾಜ್ಯ ಸರ್ಕಾರವು ಕೆ.ಐ.ಎ.ಡಿ.ಬಿ.ಯ ಮುಖಾಂತರ ಶೇಕಡ 20 ರಷ್ಟು ಈಕ್ವಿಟಿಯನ್ನು ತೊಡಗಿಸುವುದರ ಮೂಲಕ ಇದರಲ್ಲಿ ಭಾಗವಹಿಸುತ್ತಿದೆ.

ಈ. ಸಿಂಗಾಪೂರ್ ದೇಶದ ಇನ್‌ಫರ್ಮೇಷನ್ ಟೆಕ್ನಾಲಜಿ ಪಾರ್ಕ್ ಪಿ.ಯ.ಟಿ.ಯ.ಇ ಲಿಮಿಟೆಡ್ ಸಂಸ್ಥೆಯ ಸಹಯೋಗದೊಂದಿಗೆ ಇದನ್ನು ಪ್ರಾರಂಭಿಸಲಾಗುತ್ತಿದೆ.

ಉ. ಈ ಟೆಕ್ನಾಲಜಿ ಪಾರ್ಕ್‌ನಲ್ಲಿ ಸ್ಥಾಪನೆಯಾಗಲಿರುವ ಉದ್ದಿಮೆಗಳ ಬಂಡವಾಳವು ಸುಮಾರು 2 ಸಾವಿರ ಕೋಟಿ ಎಂದು ಅಂದಾಜು ಮಾಡಲಾಗಿದೆ. ಸುಮಾರು 17 ಸಾವಿರ ಜನರಿಗೆ ಉದ್ಯೋಗಾವಕಾಶ ದೊರಕಲಿದೆ. ಮಿತ ಅಂದಾಜಿನ ಪ್ರಕಾರ ಸದರಿ ಕಂಪನಿಗಳ ವ್ಯಾಪಾರವು ಮೊದಲನೇ ವರ್ಷದಲ್ಲಿ ಎರಡು ಸಾವಿರ ಕೋಟಿ ರೂಪಾಯಿಗಳಿಗೂ ಮೀರಲಿದ್ದು ಅದರಲ್ಲಿ ಶೇಕಡ 60 ರಿಂದ 65 ಭಾಗ ರಫ್ತಾಗುವ ನಿರೀಕ್ಷೆಯಿದೆ. ಟೆಕ್ನಾಲಜಿ ಪಾರ್ಕ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದ ಮೂಲಭೂತ ಸೌಕರ್ಯಗಳನ್ನು ಒದಗಿಸಲಿದ್ದು, ಹೆಚ್ಚಿನ ತಂತ್ರಜ್ಞಾನದ ಕಂಪ್ಯೂಟರ್ ಟೆಲಿಕಮ್ಯೂನಿಕೇಷನ್ ಎಲೆಕ್ಟ್ರಾನಿಕ್ ಮತ್ತು ಇತರೆ ಸಂಬಂಧಿತ ಕೈಗಾರಿಕೆಗಳ ಸ್ಥಾಪನೆಗೆ ನಾಂದಿಯಾಗುವುದು. ಇದರಿಂದ ಪೂರಕ ಉದ್ದಿಮೆಗಳ ಬೆಳವಣಿಗೆಗೂ ಅವಕಾಶವಾಗಲಿದೆ.

ವಿಷಯ : ಪುತ್ತೂರು ಪುರಸಭೆ ವ್ಯಾಪ್ತಿಯಲ್ಲಿರುವ ಜನರಿಗೆ ಕುಡಿಯುವ ನೀರಿನ್ನು ಒದಗಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 762 (975)

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ಪುರಸಭೆಯ ವ್ಯಾಪ್ತಿಯಲ್ಲಿರುವ ಜನರಿಗೆ ಕುಡಿಯುವ ನೀರಿನ ಶ್ರಮವನ್ನು ತಪ್ಪಿಸುವ ಬಗ್ಗೆ ಪುತ್ತೂರು ಪುರಸಭೆಯು ತನ್ನ ಪಾಲನ್ನು ದೇಣಿಗೆಯಾಗಿ ಕೊಟ್ಟಿರುವುದು ನಿಜವೇ ?

2. ಹಾಗಿದ್ದಲ್ಲಿ ಈ ಕಾಮಗಾರಿಯೂ ಇನ್ನೂ ಕಾರ್ಯರೂಪಕ್ಕೆ ಬರದಿರಲು ಕಾರಣವೇನು ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು):

1. ಹೌದು. ಪುತ್ತೂರಿಗೆ ಕುಡಿಯುವ ನೀರು ಸರಬರಾಜು ಯೋಜನೆಯ ಅಂದಾಜು ವೆಚ್ಚ ರೂ. 41.00 ಲಕ್ಷಗಳಾಗಿದ್ದು ಪುರಸಭೆಯ ವಂತಿಗೆ ರೂ. 6.15 ಲಕ್ಷದಲ್ಲಿ 1/3 ಕಂತಿನ ಹಣ ರೂ. 2.05 ಲಕ್ಷಗಳನ್ನು ಮಂಡಳಿಗೆ ಠೇವಣಿ ಮಾಡಿದ್ದಾರೆ. ಈ ಯೋಜನೆಗೆ ಕೂಡಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.

ವಿಷಯ : ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಛೇರ್‌ಮನ್ ನಿಧಿ ಸಂದಾಯವಾದ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 763 (832)

ಶ್ರಿ ವಿ. ಎಸ್. ಕೌಜಲಗಿ (ಅರಭಾವಿ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಪರಿಸರ ಮಾಲಿನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯವರು ಛೇರಮನ್ ನಿಧಿ ಎಂದು ಪ್ರತಿ ಟನ್ನಿಗೆ 5-00 ರೂಪಾಯಿಗಳನ್ನು ಕಬ್ಬಿನ ಬಿಲ್ಲಿನಲ್ಲಿ ಹಿಡಿದು ಕೊಳ್ಳುತ್ತಲಿದ್ದು, ಇದುವರೆಗೆ ಈ ಕುರಿತು ಸಂದಾಯವಾದ ಹಣವೆಷ್ಟು.

ಆ. ಈ ರೀತಿ ಛೇರ್‌ಮನ್‌ನಿಧಿ ಸಂಗ್ರಹಿಸಲು ಕಾನೂನಿನಲ್ಲಿ ಅವಕಾಶವಿದೆಯೇ

ಇ. ಛೇರ್‌ಮನ್ ನಿಧಿಯಲ್ಲಿ ಸಂಗ್ರಹವಾಗಿರುವ ಹಣವನ್ನು ಯಾವ ಯಾವ ಬಾಬುಗಳಿಗೆ ಖರ್ಚು ಮಾಡಲಾಗಿದೆ?

ಶ್ರೀ. ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ, ಯಂತ್ರಕಲೆ, ಪರಿಸರ ಮತ್ತು ಜೀವಪರಿಸ್ಥಿತಿ ಶಾಸ್ತ್ರ ರಾಜ್ಯ ಸಚಿವರು):

ಅ. ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯವರು ಛೇರ್‌ಮನ್ ನಿಧಿ ಎಂದು ಪ್ರತಿ ಟನ್ನಿಗೆ ರೂ. 5-00 ರಂತೆ 1992-93 ಸಾಲಿನಲ್ಲಿ ಮಾತ್ರ ಸಂಗ್ರಹಿಸಿದ್ದು ಒಟ್ಟು ರೂ 11.03 ಲಕ್ಷವಾಗಿರುತ್ತದೆ.

ಆ. ಸರ್ವಸದಸ್ಯರ ಸಭೆ : ಸರ್ಕಾರದ ಅನುಮೋದನೆ ಇಲ್ಲದೆ ಕಾರ್ಖಾನೆಯ ಆಡಳಿತ ಮಂಡಳಿಯು ಈ ರೀತಿ ಛೇರ್‌ಮನ್ ನಿಧಿ ಸಂಗ್ರಹಿಸಲು ಅವಕಾಶವಿರುವುದಿಲ್ಲ.

ಇ. ಛೇರ್‌ಮನ್ ನಿಧಿಯಲ್ಲಿ ಸಂಗ್ರಹಿಸಲಾಗಿರುವ ಹಣವನ್ನು ಜುಲೈ 1994ರಲ್ಲಿ ಗೋಕಾಕ್ ತಾಲ್ಲೂಕಿನಲ್ಲಿ ಘಟಪ್ರಭಾ ನದಿಗೆ ಭೀಕರ ಮಹಾಪುರ ಬಂದು ಆ ಸಮಯದಲ್ಲಿ ನೆರೆ ಹಾವಳಿಗೆ ತುತ್ತಾದ ನೆರೆ ಸಂತ್ರಸ್ತರಿಗೆ ಅಕ್ಕಿ, ಜೋಳ ಚಾದರ ಮತ್ತು ಜಿ.ಐ. ಶೀಟುಗಳ ವಿತರಣೆಗಾಗಿ ಬಳಸಲಾಗಿದೆ. ಬೆಳಗಾವಿ ಜಿಲ್ಲಾಧಿಕಾಯವರು ತಮ್ಮ ಪತ್ರ ಸಂಖ್ಯೆ ಕ್ರಮ ಸಂಖ್ಯೆ ಡಿಸಿ.ಎಫ್.ಎಫ್.ಎಲ್.ಸಿ.ಆರ್. 17: 94-95